ಸೇರಿ, ನನ್ನನ್ನು ಏಕತ್ರ ಖಂಡಿಸುತ್ತ! ಮೂವರೂ ಒಂದೆಡೆಯಿದ್ದರೆ ಸಾಕು, ನಮ್ಮ ನಡುವಿನ ಪ್ರತಿ ಐದನೇ ಮಾತು ಚಿನ್ನುವಿನ ಮದುವೆ ಕುರಿತಾಗಿಯೇ ಇರುವುದು. ಮಾತೆಂದರೆ ಬರೀ ಮಾತಲ್ಲ. ಅತ್ತುಕರೆದು ರಂಪವೇ ಉಂಟಾಗುವುದು... ಆಗಾಗ ಅಳುಗರೆವ ನನ್ನನ್ನು ತಿಳಿಗೊಳಿಸಲಿಕ್ಕೆಂದೇ, ನೀಲಿ, 'ಆಕಾಶಾತ್ ಪತಿತಂ ತೋಯಂ, ಯಥಾ ಗಚ್ಛತಿ ಸಾಗರಂ...' ಎಂದು ರಾಗವಾಗಿ ಆಡಿಕೊಳ್ಳುವರು. 'ಪುಟ್ಟಿ ಪುಟ್ಟಿ... ನಿನಗೆ ಇದರ ಅರ್ಥ ಗೊತ್ತಾ?' ಮಗಳನ್ನು ಕೇಳಿ ತಮಾಷೆಗೆ ತೊಡಗುವರು. 'ಆಕಾಶದ ನೀರೆಲ್ಲ ಸಮುದ್ರವನ್ನೇ ಸೇರುವುದು... ಅಮ್ಮನ ಬಾಯಿ ಸದಾ (ಮಗಳ) ಲಗ್ನವನ್ನು ನುಡಿವುದು...' ಎಂದು ಅಣಕಿಸಿ ಆಡಿ ನನ್ನಲ್ಲಿ ನಗು ಹುಟ್ಟಿಸುವರು! 'ನಿನ್ನ ಮಗಳು ನಿನ್ನ ಥರ ಇಲ್ಲ ಅನ್ನೋದೇ ಖುಷಿಯ ಸಂಗತಿ, ಕನಕವಾರಿ...' ಎಂದು ನಗುವರು. 'ನಾನೆಲ್ಲಿ ಹೇಳಿಕೊಂಡೆ ಅವಳು ನನ್ನ ಮಗಳು ಅಂತ? ಅವಳು ನಿಮ್ಮ ಥರ ಇರೋದೇ ನನಗೆ ಸಮಸ್ಯೆ...' ಗಂಡನ ಜಾಣಮಾತನ್ನು ವೃಥಾ ಸೆಣಸುವೆನು. 'ಅಪ್ಪ ನನ್ನ ಥರ ಇದ್ದಾರೆ ಅನ್ನೋದು ನನ್ನ ಹೆಮ್ಮೆ...' ಎಂದು ಚಿನ್ನು, ಒಮ್ಮೆಗೇ ನಮ್ಮಿಬ್ಬರ ನಡುಮೂಡಿ ಹಮ್ಮು ಬೀಗುವಳು!

ಹೌದು. ಚಿನ್ನು ನನ್ನ ಹಾಗಲ್ಲ. ಅವಳು ನನ್ನಂತೆಂದು ನನಗೆಂದೂ ಅನಿಸಿಯೂ ಇಲ್ಲ. ಮೆನೋಪಾಸು ತೀರಿಯೂ ತೀರದುಳಿದಿರುವ ನನ್ನದೊಂದೇ ಒಂದು ಸರಕೆಂದರೆ ಪುಕ್ಕಲುತನ. ಮಹಾ ಮಹಾ ಪುಕ್ಕಲಿ ನಾನು. ಹೀಗಿರುವುದೇ ಹೆಣ್ತನವೆಂದು ಬಗೆದವಳು. ಅವರಿವರು ಏನಂದುಕೊಂಡಾರೆಂದು ಸದಾ ಭಿಡೆ ಮಾಡಿಕೊಂಡೇ ಬದುಕಿದವಳು. ಇವೊತ್ತಿಗೂ, ನನ್ನ ಅತ್ತೆ–ಅಂದರೆ ನೀಲಿಯ ಅಮ್ಮನೊಡನೆ ಫೋನಿನಲ್ಲಿ ಮಾತಾಡಲೂ ದಿಗಿಲುಪಡುವ ಸೊಸೆ ನಾನು! ಅವರೊಡನೆಂದೂ ಹೆಚ್ಚು ಮಾತನಾಡಿದವಳಲ್ಲ. ಹಾಗಂತ ಆಕೆ ನನ್ನ ಮೇಲೆ ಅತ್ತೆತನ ತೋರಿಲ್ಲವೆಂತಲೂ ಅಲ್ಲ. ಕಿರಿಮಗನ ಜೊತೆ ತಂಗುವ ಆಕೆ, 'ನೀಲಕಂಠನ್ನ ಸ್ವಲ್ಪ ಕರೀತೀಯಾ, ಕನಕಾ...' ಎಂದು ಸಲೀಸಾಗಿ ಹೇಳಿದರೂ, ಆಜ್ಞಾಪನೆಯೆಂದೇ ಬಗೆದು ಸಣ್ಣಗೆ ನಡುಗಿ, 'ಓ... ಒನ್ನಿಮಿಷ ಅತ್ತೆಮ್ಮ...' ಅಂತಂದು, ಅವರ ಉಳಿದ ಏನು ಎತ್ತ ಸಹ ವಿಚಾರಿಸದೆ, ಸೀದಾ ಗಂಡನ ಕೈಗೆ ಫೋನು ವರ್ಗಾಯಿಸುವೆನು. ನಾನು ಮೊದಲಿನಿಂದಲೂ ಹೀಗೆ; ನಾನಾಯಿತು, ನನ್ನದಾಯಿತು... ಅಷ್ಟೆ. ತಾನು ಮತ್ತು ಮೇವು ಅಂತಿರುವ ಹಸುವಿನ ಹಾಗೆ! 'ಐವತ್ತೆರಡಾಯಿತಲ್ಲ, ಕನಕ –ನಿನಗೆ? ಈಗಲೂ ನಮ್ಮಮ್ಮನ್ನ ಕಂಡರೆ ಹೆದರೋದಾ?' ನೀಲಿ ಸದಾ ಗೇಲಿ ಮಾಡುವರು. 'ಅವರು ಈ ಮನೆಯ ಹೈಯೆಸ್ಟ್ ಕಮಾಂಡ್ ಅಲ್ಲವಾ?!' ಅನ್ನುತ್ತ ತುಸುವೇ ನಗುವೆನು.

ಇರಲಿ... ಇಂತಹ ನಾನು, ನಾನಾಗಿಯೇ ತಲೆಕೆಡಿಸಿಕೊಂಡ ನನ್ನದಲ್ಲದ ವಿಷಯವೆಂದರೆ ಚಿನ್ನುವಿನ ಮದುವೆಯದು ಮಾತ್ರ!

ಚಿನ್ನು ನನ್ನ ಹಾಗಲ್ಲ. ಅಪ್ಪನಷ್ಟೇ ವಾಚಾಳಿ; ಮತ್ತು ಅಪ್ಪನಿಗೂ ಒಂದು ಕೈ ಹೆಚ್ಚೇ ನಿರ್ಭಿಡೆಯ ಹುಡುಗಿ. ರೂಪಿನಲ್ಲೂ ಸರಿಸುಮಾರು ಅಪ್ಪನನ್ನೇ ಹೋಲುವವಳು. ನಾನೆಷ್ಟು ಪುಕ್ಕಲಿಯೋ, ಅಷ್ಟೇ ಆಪೋಸಿಟ್ಟು; ದಿಟ್ಟೆ. ಗಂಡುಬೀರಿ. ಮೊದಲಿನಿಂದಲೂ ಗಂಡುಹುಡುಗರೊಡನೆಯೇ ಹೆಚ್ಚು ಸಲುಗೆ ಇಡುವವಳು. ಪೋಕರಿಗಳ ಸಮಾ ಚೇಷ್ಟೆ ಮಾಡುವಳು. ಲಗೋರಿ, ಚಿನ್ನಿದಾಂಡು, ಕ್ರಿಕೆಟ್ಟು... ನಮ್ಮ ಬೀದಿಯಲ್ಲಿ ಜರುಗುವ ಎಲ್ಲ ಪಂದ್ಯಾವಳಿಯಲ್ಲೂ ಮುಂದಾಳು ಇವಳೇ! ಇನ್ನು ಫ್ರೆಂಡ್ಸ್–ಲಿಸ್ಟಿನಲ್ಲಿ ಇವೊತ್ತಿಗೂ ಹುಡುಗರದ್ದೇ ಸಿಂಹಪಾಲು. ಮಾತುಮಾತಿಗೂ ಪುನೀತ್, ವಿನೀತ್, ಇಮ್ರಾನ್, ಕ್ರಿಸ್ಟಫರ್, ಶಬೀರ್... ಕೇತನ್... ಚರಿತ್... ಎಂಬಿತ್ಯಾದಿ ಪುರುಷಾಕೃತಿಗಳನ್ನೇ ನೆನೆಯುವಳು. ನಾನು ರಾಮು... ಕೃಷ್ಣ... ಎಂದು ದೇವರುಗಳನ್ನು